

# ಅವರವರ ಅನುಭವ

■ ವಸುಮತಿ ಉಡುಪ

'ಯಾರು ಹೇಳಿದ್ದು ಈ ಕಾಲದಲ್ಲಿ ಹೆಣ್ಣುಮಕ್ಕಳು, ಗಂಡುಮಕ್ಕಳು ಅನ್ನೋ ಭೇದಭಾವ ಇಲ್ಲ ಅಂತ. ಲೆಕ್ಕ ತೆಗೆದರೆ ಹಾಗೆ ನಂಬಿದೋರು, ನಡೆದುಕೊಳ್ಳೋರು ಒಂದು ಮುಷ್ಟಿ ಜನ ಇರಬಹುದು. ಅವರ ಮನೇಲೇ ಗಂಡು ಹುಟ್ಟಿದರೆ ಅವರಿಗೆ ಕೋಡು ಬಂದಂತಾಗೋದು ಹೌದಾ, ಸುಳ್ಳಾ ನೀನೇ ನೋಡು' ಅಂದಳು ನಳಿನಿ.

'ಏ, ಸುಮ್ನಿರೇ. ನೀನು ನಂಬ್ಕೊಂಡಿದ್ದೇ ದೊಡ್ಡ ಸತ್ಯ ಅನ್ನೋ ಹಾಗೆ ಮಾತಾಡ್ಬೇಡ'.

'ಹಾಗಿದ್ರೆ ಈಗ್ಲೂ ಹೆಣ್ಣು ಭ್ರೂಣಹತ್ಯೆ ನಡೀತಿರೋದು ಸುಳ್ಳಾ? ಕಾನೂನುಬಾಹಿರ ಅಂತ ಗೊತ್ತಿದ್ರೂ ಕದ್ದು ಮುಚ್ಚಿ ನಡೆಯೋ ವ್ಯವಹಾರ ಕೆಲವು ದಿನ ದೊಡ್ಡ ಸುದ್ದಿಯಾಗೋದಿಲ್ವಾ? ಹೆಣ್ಣು ಹುಟ್ಟಿತು ಅಂತ ಹೆಂಡತೀನೇ ಬಿಟ್ಟು ಬಿಡೋರು, ಹುಟ್ಟಿದ ಮಗುವಿನ ಕತ್ತು ಹಿಸುಕೋರು, ಹಾದಿ ಬದಿ ಬಿಸಾಕಿ ಹೋಗೋರು'

'ವಿದ್ಯಾವಂತರು ಅನ್ನಿಸ್ಕೊಂಡೋರು ಹೀಗೆಲ್ಲಾ ಮಾಡಲ್ಲ ಕಣೇ. ಯುಕ್ತಾಯುಕ್ತ ವಿವೇಚನೆ ಅನ್ನೋದು ಇರುತ್ತೆ ಅವರಿಗೆ' ಅಂದಳು ಮಮತಾ.

'ಇರುತ್ತೆ, ಇರುತ್ತೆ. ಹೇಳಿದ್ನಲ್ಲ, ಎಲ್ಲೋ ಒಂದು ಮುಷ್ಟಿ ಜನಕ್ಕೆ'.

'ನೀನು ಯಾಕೋ ಅತೀ ಆಡ್ತಿದ್ದಿ. ಈ ಕಾಲದಲ್ಲಿರೋಕೆ ಲಾಯಖ್ಖಿಲ್ಲ ನೀನು'.

'ಇರಬಹುದು ಕಣೇ. ನಾನೇನು ಕತೆ ಕಟ್ಟಿ ಹೇಳ್ತಿಲ್ಲ. ವಿದ್ಯಾವಂತರು ಅನ್ನಿಸ್ಕೊಂಡೋರೇ ಹೆಣ್ಣುಮಗುವಿನ ಬಗ್ಗೆ ಹೇಗೆ ನಡ್ಕೋತಾರೆ ಅನ್ನೋದು ಗೊತ್ತುಂಟು ನಂಗೆ...'

'ಅದು ಹ್ಯಾಗೆ ಗೊತ್ತುಂಟು ಮಾರಾಯ್ತೀ? ನಂಗೂ ಸ್ವಲ್ಪ ಹೇಳು...'

ಸ್ವಲ್ಪ ಹೊತ್ತು ಬಾಯಿಗೆ ಕಡುಬು ತುರುಕಿಕೊಂಡವಳಂತೆ ತೆಪ್ಪಗಿದ್ದಳು ನಳಿನಿ. ಅವಳ ಮುಖ ಸಪ್ಪಗಾಯ್ತು ಎಂದು ಅನಿಸಿತು ಮಮತನಿಗೆ. ಒಳಮುರಿಗೆ ಏನೋ ಇದೆ. ಹೇಳಬಹುದು ಅವಳೇ. ತಾನು ಬಾಯಿ ಬಿಡಿಸಲು ಪ್ರಯತ್ನಿಸುವುದು ಸರಿಯಲ್ಲ. ಒಬ್ಬರಿನ್ನೊಬ್ಬರನ್ನು ನೋಡದೆ, ಮಾತಾಡದೆ, ನಡುವೆ ಎಷ್ಟೋ ವರ್ಷಗಳು ಕಳೆದು ಹೋಗಿದ್ದರೂ ಇದೀಗ ಒಟ್ಟಿಗೆ ಎರಡು ದಿನಗಳಿಂದ ಒಡನಾಡುತ್ತಿದ್ದಂತೆ ವರ್ಷಗಳ ಅಂತರ ತಮ್ಮಿಬ್ಬರ ನಡುವೆ ಅಳಿಸಿಹೋಗಿ ಹಿಂದಿನ ಅದೇ ಅನುಬಂಧ ಮತ್ತೆ ಬೆಸೆದುಕೊಂಡಿದೆ. ಬಾಲ್ಯದ ಗೆಳೆತನವೆಂದರೆ ಅದು ಹೀಗೇ. ಮುಗ್ಧತೆ ತುಂಬಿದ ಆ ಕಾಲದ ಸ್ನೇಹದಲ್ಲೊಂದು ಮಾಧುರ್ಯ ಇರುತ್ತದೆ. ನಿಷ್ಕಲ್ಮಷ ನಂಟು ಇರುತ್ತದೆ. ಪ್ರೀತಿಯೂ...

ಅಪರೂಪಕ್ಕೆ ಗೆಳತಿಯರು ಒಟ್ಟಾಗಿದ್ದಾರೆ. ಮತ್ತೊಬ್ಬ ಗೆಳತಿಯ ಮಗಳ ಮದುವೆಯ